ಕ್ರಮ ಸಂಖ್ಯೆ: 244
ವಿಭಾಗ: DEV
ದಿನಾಂಕ: 16/09/23

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುರ್ವೇದ, ಯುನಾನಿ, ಹೋಮಿಯೋಪತಿ ಹಾಗೂ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಮಾಡುವ ಬಗ್ಗೆ.

15/09/23

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಆಕುಕ 253 ಪಿಐಎಂ 2022, ದಿನಾಂಕ:13.10.2022, 29.10.2022, 18.11.2022 ಮತ್ತು 02.02.2023.
2. ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ ಸಂಖ್ಯೆ: ಆಯುಷ್/ 02 / ವೈಶಿ(2)/ 2023-24, ದಿನಾಂಕ:20.06.2023.
3. ಮಾನ್ಯ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:10.08.2023 ರಂದು ನಡೆದ ಸಭೆಯ ನಡವಳಿ.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1) ರ ಸರ್ಕಾರದ ಆದೇಶದಲ್ಲಿ 2022-23ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ. ಸಂ. (2) ರ ಪತ್ರದಲ್ಲಿ ಆಯುಕ್ತರು, ಆಯುಷ್ ಇಲಾಖೆ ಇವರು 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ಶುಲ್ಕ ನಿರ್ಧರಣೆಯ ಬಗ್ಗೆ ಸರ್ಕಾರದ ಹಂತದಲ್ಲಿ ಕ್ರಮಕೈಗೊಂಡು ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(3) ರ ನಡವಳಿಯಲ್ಲಿ ಮಾನ್ಯ ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಖಾಸಗಿ ಆಯುಷ್ ಮಹಾವಿದ್ಯಾಲಯಗಳ ಫೆಡರೇಷನ್ ಹಾಗೂ ಕರ್ನಾಟಕ ಖಾಸಗಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ಅಸೋಸಿಯೇಷನ್ ಮತ್ತು ವಿವಿಧ ಖಾಸಗಿ ಆಯುಷ್ ಮಹಾವಿದ್ಯಾಲಯಗಳ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ, ಅನುದಾನ ರಹಿತ ಖಾಸಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ, ಹೋಮಿಯೋಪತಿ, ಆಯುರ್ವೇದ ಹಾಗೂ ಯುನಾನಿ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು ಪರಿಷ್ಕರಿಸಿ ನಿಗದಿಪಡಿಸಲು ಸರ್ಕಾರವು ತೀರ್ಮಾನಿಸಿದ್ದು, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾದ ಆದೇಶ ಸಂಖ್ಯೆ: ಆಕುಕ 132 ಪಿಐಎಂ 2023,**
**ಬೆಂಗಳೂರು, ದಿನಾಂಕ:14.09.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಮತ್ತು ಅನುದಾನ ರಹಿತ, ಖಾಸಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ,

14/9

.....2

ಹೋಮಿಯೋಪತಿ, ಆಯುರ್ವೇದ ಹಾಗೂ ಯುನಾನಿ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕವನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಿದೆ.

## ಪದವಿ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ

### ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಬಿ.ಎನ್.ವೈ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ರಾಜ್ಯ ಸರ್ಕಾರದ ಸೀಟುಗಳು | ಶೇ.100 | ರೂ. 25,000/- |

### ಬಿ.ಎ.ಎಂ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ. 25,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ. 85 | ರೂ.25,000/- |

### ಬಿ.ಹೆಚ್.ಎಂ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ. 25,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ. 85 | ರೂ.25,000/- |

### ಬಿ.ಯು.ಎಂ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ. 25,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ. 85 | ರೂ.25,000/- |

## ಆ) ಅನುದಾನಿತ ಮಹಾವಿದ್ಯಾಲಯಗಳಲ್ಲಿ

### ಬಿ.ಎ.ಎಂ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.60,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.65 | ರೂ.60,000/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.5,00,000/- |

14/9

## ಇ) ಅನುದಾನ ರಹಿತ ಖಾಸಗಿ ಮಹಾವಿದ್ಯಾಲಯಗಳಲ್ಲಿ

### ಬಿ.ಎ.ಎಂ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.2,50,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.75,000/- |
| 3 | ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ. 40 | ರೂ.4,00,,000/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.6,00,000/- |

### ಬಿ.ಎನ್.ವೈ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ರಾಜ್ಯ ಸರ್ಕಾರದ ಸೀಟುಗಳು | ಶೇ.20 | ರೂ.60,000/- |
| 2 | ಕೆ.ಇ.ಎ. ಭರ್ತಿಮಾಡುವ ಆಡಳಿತ ಮಂಡಳಿ ಸೀಟುಗಳು. | ಶೇ.20 | ರೂ.1,83,750/- |
| 3 | ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.40 | ರೂ.1,83,750/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.7,00,00/- |

### ಬಿ.ಹೆಚ್.ಎಂ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.2,30,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.75,000/- |
| 3 | ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ. 40 | ರೂ.3,50,000/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.3,50,000/- |

### ಬಿ.ಯು.ಎಂ.ಎಸ್. ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.2,00,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.75,000/- |
| 3 | ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ. 40 | ರೂ.2,50,000/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.2,50,000/- |

## ಸ್ನಾತಕೋತ್ತರ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ

### ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ

### ಸ್ನಾತಕೋತ್ತರ ಆಯುರ್ವೇದ, ಯುನಾನಿ & ಹೋಮಿಯೋಪತಿ ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1. | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.50,000/- |
| 2. | ರಾಜ್ಯ ಸರ್ಕಾರದ ಸೀಟುಗಳು | ಶೇ.85 | ರೂ. 50,000/- |

.....4

1419

## ಆ) ಅನುದಾನ ರಹಿತ ಖಾಸಗಿ ಮಹಾವಿದ್ಯಾಲಯಗಳಲ್ಲಿ

### ಸ್ನಾತಕೋತ್ತರ ಆಯುರ್ವೇದ ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.4,00,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.1,25,000/- |
| 3 | ಅಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.40 | ರೂ.5,00,000/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.7,00,000/- |

### ಸ್ನಾತಕೋತ್ತರ ಹೋಮಿಯೋಪತಿ ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.4,00,000/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.1,25,000/- |
| 3 | ಅಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.40 | ರೂ.4,50,000/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ.4,50,000/- |

### ಸ್ನಾತಕೋತ್ತರ ಯುನಾನಿ ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.3,67,500/- |
| 2 | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.1,00,000/- |
| 3 | ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.40 | ರೂ. 3,67,500/- |
| 4 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು. | ಶೇ.20 | ರೂ. 3,67,500/- |

### ಸ್ನಾತಕೋತ್ತರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ವಾರ್ಷಿಕ ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1 | ರಾಜ್ಯ ಸರ್ಕಾರದ ಸೀಟುಗಳು | ಶೇ.25% | ರೂ.1,00,000/- |
| 2 | ಆಡಳಿತ ಮಂಡಳಿ ಕೋಟಾ ಸೀಟುಗಳು | ಶೇ.55% | ರೂ.3,67,500/- |
| 3 | NRI/ಆಡಳಿತ ಮಂಡಳಿ ಕೋಟಾ ಸೀಟುಗಳು | ಶೇ.20% | ರೂ.14,00,000/- |

ಖಾಸಗಿ ಆಡಳಿತ ಮಂಡಳಿಯವರು ಸರ್ಕಾರ ನಿಗದಿಪಡಿಸಿದ ಗರಿಷ್ಠ ವಾರ್ಷಿಕ ಶುಲ್ಕ ಮೊತ್ತಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ.

.....5

1419

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು NCISM ಹಾಗೂ NCH ಹೊರಡಿಸಿರುವ ಮಾರ್ಗಸೂಚಿ ಹಾಗೂ ವೇಳಾ ಪಟ್ಟಿಗಳನುಸಾರ ಕೌನ್ಸೆಲಿಂಗ್ ನಡೆಸುವುದು.

ಆಯುರ್ವೇದ, ಯುನಾನಿ ಮತ್ತುಹೋಮಿಯೋಪತಿ ಕೋರ್ಸುಗಳಿಗೆ NRI/ಆಡಳಿತ ಮಂಡಳಿ ಕೋಟಾ ಸೀಟುಗಳನ್ನು NRI ಅಭ್ಯರ್ಥಿಗಳಿಗೆ 2 ಸುತ್ತಿನ ಕೌನ್ಸೆಲಿಂಗ್ ಬಳಿಕ ಉಳಿಕೆ ಸೀಟುಗಳನ್ನು ಅದೇ NRI ಶುಲ್ಕದಲ್ಲೇ ಆಡಳಿತ ಮಂಡಳಿ ಕೋಟಾದಲ್ಲಿ ಕೆ.ಇ.ಎ. ಮೂಲಕ ಹಂಚಿಕೆ ಮಾಡತಕ್ಕದ್ದು.

ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯಗಳಿಗೆ 20% ಆಡಳಿತ ಮಂಡಳಿಯ ಕೋಟಾ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ 2ನೇ ಸುತ್ತಿನ ಕೌನ್ಸೆಲಿಂಗ್ ಬಳಿಕ ಉಳಿಕೆ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆಡಳಿತ ಮಂಡಳಿಗಳಿಗೆ ಬಿಟ್ಟುಕೊಡತಕ್ಕದ್ದು.

ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯಗಳ ಪದವಿ ಕೋರ್ಸ್ 60% ಮತ್ತು ಸ್ನಾತಕೋತ್ತರ ಕೋರ್ಸ್ 75% NRI ಮತ್ತು ಆಡಳಿತ ಮಂಡಳಿ ಕೋಟಾ ಸೀಟುಗಳನ್ನು ಆಡಳಿತ ಮಂಡಳಿಗಳೇ ಭರ್ತಿ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎಸ್. ಪುಷ್ಪ)** 4/9/23
ಸರ್ಕಾರದ ಜಂಟಿ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ &ಎಸ್.ಎಸ್.ಎ/ಇ & ಆರ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ" ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329. ಬೆಂಗಳೂರು – 560001.
3. ಆಯುಕ್ತರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು – 560 009.
4. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6. ಸಂಬಂಧಿಸಿದ ಮಹಾವಿದ್ಯಾಲಯಗಳಿಗೆ (ಆಯುಕ್ತರು, ಆಯುಷ್ ಇಲಾಖೆ ಇವರ ಮುಖಾಂತರ)
7. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿಗಳು:**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2024-25ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಆಯುರ್ವೇದ, ಯುನಾನಿ, ಹೋಮಿಯೋಪತಿ ಹಾಗೂ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಪದ್ಧತಿಯ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ಶುಲ್ಕ ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಆಕುಕ 132 ಪಿಐಎಂ 2023, ದಿನಾಂಕ:14.09.2023.
2. ಶುಲ್ಕ ನಿಯಂತ್ರಣ ಸಮಿತಿಯ ನಡವಳಿ ದಿನಾಂಕ: 28.03.2024.
3. ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ ಸಂಖ್ಯೆ: ಆಯುಷ್/02/ವೈಶಿ(2)/2024-25, ದಿನಾಂಕ: 06.05.2024 ಮತ್ತು 07.05.2024.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಆದೇಶದಲ್ಲಿ, 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಮತ್ತು ಅನುದಾನ ರಹಿತ, ಖಾಸಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ, ಹೋಮಿಯೋಪತಿ, ಆಯುರ್ವೇದ ಹಾಗೂ ಯುನಾನಿ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್ ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (2)ರ ದಿನಾಂಕ: 28.03.2024 ರಂದು ನಡೆದ ಶುಲ್ಕ ನಿಯಂತ್ರಣ ಸಮಿತಿಯ (Fee Regulatory Committee) ಸಭೆಯ ನಡವಳಿಯಲ್ಲಿ, 2023-24ನೇ ಸಾಲಿನ ಶುಲ್ಕವನ್ನೇ 2024-25ನೇ ಸಾಲಿಗೆ ಮುಂದುವರೆಸಿ, Consensual agreement ಮೂಲಕ ಶುಲ್ಕ ನಿಗದಿಪಡಿಸಲು ಪರಿಗಣಿಸಬಹುದಾಗಿದೆ ಎಂದು ನಿರ್ಧರಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ. (3)ರ ಪತ್ರಗಳಲ್ಲಿ, ಆಯುಕ್ತರು, ಆಯುಷ್ ಇಲಾಖೆ ಇವರು ಕರ್ನಾಟಕ ರಾಜ್ಯ ಆಯುರ್ವೇದಿಕ್ ಮೆಡಿಕಲ್ ಕಾಲೇಜುಗಳ ಫೆಡರೇಷನ್ (ರಿ) ಹಾಗೂ ಕರ್ನಾಟಕ ಖಾಸಗಿ ಯೋಗ ಮತ್ತು ನ್ಯಾಚುರೋಪತಿ ಕಾಲೇಜುಗಳ ಮ್ಯಾನೇಜ್‌ಮೆಂಟ್ ಫೆಡರೇಷನ್ (ರಿ) ಇವರುಗಳು 2023-24ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿರುವ ಸೀಟು ಹಂಚಿಕೆ ಅನುಪಾತ ಮತ್ತು ಶುಲ್ಕವನ್ನು 2024-25ನೇ ಸಾಲಿಗೆ ಮುಂದುವರೆಸಲು ಕೋರಿರುತ್ತಾರೆ.

ಮುಂದುವರೆದು, ಕರ್ನಾಟಕ ಖಾಸಗಿ ಹೋಮಿಯೋಪತಿ ವೈದ್ಯಕೀಯ ಕಾಲೇಜುಗಳ ಮ್ಯಾನೇಜ್ ಮೆಂಟ್ ಫೆಡರೇಷನ್ (ರಿ), ಇವರು ರಾಜ್ಯದ ಸರ್ಕಾರಿ ಮತ್ತು ಅನುದಾನ ರಹಿತ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ ಮತ್ತು ಖಾಸಗಿ ಮಹಾವಿದ್ಯಾಲಯಗಳಲ್ಲಿನ ಸ್ನಾತ್ತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆಯ ಅನುಪಾತ ಮತ್ತು ಶುಲ್ಕ ನಿಗದಿಗೆ ಸಂಬಂಧಿಸಿದಂತೆ 2023-24ನೇ ಶೈಕ್ಷಣಿಕ ಸಾಲಿಗೆ ಪದವಿ ಮತ್ತು ಸ್ನಾತಕೋತ್ತರ ಪದವಿಯ ಸರ್ಕಾರಿ ಕೋಟಾ ಸೀಟುಗಳ ಶುಲ್ಕವನ್ನು ಯಥಾವತ್ತಾಗಿ ಮುಂದುವರೆಸಲು ಹಾಗೂ ಉಳಿದ ಕೋಟಾ ಸೀಟುಗಳ ಶುಲ್ಕವನ್ನು ಕಡಿಮೆ ಮಾಡಿ 2024-25ನೇ ಸಾಲಿಗೆ Consensual agreement ಮಾಡಿಕೊಳ್ಳಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಆಯುರ್ವೇದಿಕ್, ಯುನಾನಿ ಹಾಗೂ ಯೋಗ ಮತ್ತು ನ್ಯಾಚುರೋಪತಿ ಕಾಲೇಜುಗಳ ಮ್ಯಾನೇಜ್‌ಮೆಂಟ್ ಫೆಡರೇಷನ್ ಇವರುಗಳು ಸೀಟು ಹಂಚಿಕೆ ಅನುಪಾತ ಮತ್ತು ಶುಲ್ಕವನ್ನು ಹೆಚ್ಚಿಸುವ ಬಗ್ಗೆ ಯಾವುದೇ ಪ್ರಸ್ತಾಪ ಮಾಡದೇ ಇರುವುದರಿಂದ ಹಾಗೂ ಹೋಮಿಯೋಪತಿ ಕಾಲೇಜುಗಳ ಮ್ಯಾನೇಜ್‌ಮೆಂಟ್ ಫೆಡರೇಷನ್ ಇವರು ಸಹ BHMS ಹಾಗೂ M.D. (Hom) Course ಗಳ ರಾಜ್ಯ ಸರ್ಕಾರಿ ಕೋಟಾಗೆ ಸಂಬಂಧಿಸಿದಂತೆ, 2023-24ನೇ ಸಾಲಿನ ಸೀಟು ಹಂಚಿಕೆ ಅನುಪಾತ ಹಾಗೂ ಶುಲ್ಕವನ್ನು ಯಥಾವತ್ತಾಗಿ ಮುಂದುವರೆಸಲು, ಉಳಿದಂತೆ, BHMS ಹಾಗೂ M.D. (Hom) Course ಗಳ ವಿವಿಧ ಕೋಟಾಗಳ ಶುಲ್ಕವನ್ನು ಕಡಿಮೆ ಮಾಡಲು ಕೋರಿರುವುದನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 258 ಪಿಐಎಂ 2024, ಬೆಂಗಳೂರು,**
**ದಿನಾಂಕ:22.08.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಆಯುರ್ವೇದ, ಯುನಾನಿ ಹಾಗೂ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಪದ್ಧತಿಯಲ್ಲಿನ ರಾಜ್ಯದ ಸರ್ಕಾರಿ ಮತ್ತು ಅನುದಾನ ರಹಿತ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತ್ತಕೋತ್ತರ ಕೋರ್ಸ್‌ಗಳಿಗೆ 2023-24ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿದ ಸೀಟು ಹಂಚಿಕೆಯ ಅನುಪಾತ ಮತ್ತು ಶುಲ್ಕವನ್ನು 2024-25ನೇ ಸಾಲಿಗೆ ಯಥಾವತ್ತಾಗಿ ಮುಂದುವರೆಸಿ ಆದೇಶಿಸಿದೆ.

ಮುಂದುವರೆದು, ರಾಜ್ಯದ ಸರ್ಕಾರಿ ಮತ್ತು ಅನುದಾನ ರಹಿತ ಖಾಸಗಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತ್ತಕೋತ್ತರ ಕೋರ್ಸ್‌ಗಳ ಸರ್ಕಾರಿ ಕೋಟಾ ಸೀಟುಗಳಿಗೆ ಸಂಬಂಧಿಸಿದಂತೆ, 2023-24ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿದ ಸೀಟು ಹಂಚಿಕೆಯ ಅನುಪಾತ ಮತ್ತು ಶುಲ್ಕವನ್ನು 2024-25ನೇ ಸಾಲಿಗೆ ಯಥಾವತ್ತಾಗಿ ಮುಂದುವರೆಸಿದೆ. ಆದರೆ, ಅನುದಾನರಹಿತ ಖಾಸಗಿ ಹೋಮಿಯೋಪತಿ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದ ಈ ಕೆಳಕಂಡ ಕೋಟಾ ಸೀಟುಗಳ ಶುಲ್ಕವನ್ನು ಮಾತ್ರ ಈ ಕೆಳಗೆ ನಮೂದಿಸಿರುವಂತೆ ಕಡಿಮೆ ಮಾಡಿ ಆದೇಶಿಸಿದೆ:-

**BHMS Course:**

| Seat Category | Percentage of seats | Existing Fees for 2023-24 | Proposed Fees for 2024-25 |
|---|---|---|---|
| All India Quota | 15% | Rs.2,30,000.00 | Rs.2,25,000.00 |
| Management Quota | 40% | Rs.3,50,000.00 | Rs.2,50,000.00 |
| Management/NRI Quota | 20% | Rs.3,50,000.00 | Rs.2,50,000.00 |

**M.D. (Hom) Courses:**

| Seat Category | Percentage of seats | Existing Fees for 2023-24 | Proposed Fees for 2024-25 |
|---|---|---|---|
| All India Quota | 15% | Rs.4,00,000.00 | Rs.2,50,000.00 |
| Management Quota | 40% | Rs.4,50,000.00 | Rs.2,75,000.00 |
| Management/NRI Quota | 20% | Rs.4,50,000.00 | Rs.2,75,000.00 |

ಖಾಸಗಿ ಆಡಳಿತ ಮಂಡಳಿಯವರು ಸರ್ಕಾರ ನಿಗದಿಪಡಿಸಿದ ಗರಿಷ್ಠ ವಾರ್ಷಿಕ ಶುಲ್ಕದ ಮೊತ್ತಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ.

...3

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು NCISM ಹಾಗೂ NCH ಹೊರಡಿಸಿರುವ ಮಾರ್ಗಸೂಚಿ ಹಾಗೂ ವೇಳಾ ಪಟ್ಟಿಗಳನುಸಾರ ಕೌನ್ಸಿಲಿಂಗ್ ನಡೆಸುವುದು.

ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಕೋರ್ಸುಗಳಿಗೆ ಸಂಬಂಧಿಸಿದಂತೆ NRI/ಆಡಳಿತ ಮಂಡಳಿ ಕೋಟಾ ಸೀಟುಗಳನ್ನು NRI ಅಭ್ಯರ್ಥಿಗಳಿಗೆ 2 ಸುತ್ತಿನ ಕೌನ್ಸಲಿಂಗ್ ನಡೆಸಿದ ಬಳಿಕ, ಉಳಿಕೆ ಸೀಟುಗಳನ್ನು ಅದೇ NRI ಶುಲ್ಕದಲ್ಲೇ ಆಡಳಿತ ಮಂಡಳಿ ಕೋಟಾದಡಿಯಲ್ಲಿಲಿ ಕೆ.ಇ.ಎ. ಮೂಲಕ ಹಂಚಿಕೆ ಮಾಡತಕ್ಕದ್ದು.

ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯಗಳಿಗೆ 20% ಆಡಳಿತ ಮಂಡಳಿಯ ಕೋಟಾ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ 2ನೇ ಸುತ್ತಿನ ಕೌನ್ಸಲಿಂಗ್ ಬಳಿಕ ಉಳಿಕೆ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆಡಳಿತ ಮಂಡಳಿಗಳಿಗೆ ಬಿಟ್ಟುಕೊಡತಕ್ಕದ್ದು.

ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯಗಳ ಪದವಿ ಕೋರ್ಸ್ 60% ಮತ್ತು ಸ್ನಾತಕೋತ್ತರ ಕೋರ್ಸ್ 75% NRI ಮತ್ತು ಆಡಳಿತ ಮಂಡಳಿ ಕೋಟಾ ಸೀಟುಗಳನ್ನು ಆಡಳಿತ ಮಂಡಳಿಗಳೇ ಭರ್ತಿ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಶ್ರೀಪತಿ ಪಿ.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

22/08

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ/ಇ&ಆರ್. ಎಸ್.ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಅಂಚೆಪಟ್ಟಿಗೆ ಸಂಖ್ಯೆ: 5329, 560 001.
3. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
4. ಕುಲಸಚಿವರು, ರಾಜೀವ್ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6. ಸಂಬಂಧಪಟ್ಟ ಮಹಾವಿದ್ಯಾಲಯಗಳಿಗೆ, (ಆಯುಕ್ತರು, ಆಯುಷ್ ಇಲಾಖೆ ಇವರ ಮುಖಾಂತರ).
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**<u>ಪ್ರತಿ:</u>**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, 4ನೇ ಮಹಡಿ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ-3, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.

Ayush

ಕರ್ನಾಟಕ ಪರೀಕ್ಷಾ ಪ್ರಾಧಿಕಾರ
ಬೆಂಗಳೂರು - 560 012
ಸ್ವೀಕೃತ ಸಂಖ್ಯೆ CR2762
ದಿನಾಂಕ 11/08/25

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2025-26ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಆಯುರ್ವೇದ, ಯುನಾನಿ, ಹೋಮಿಯೋಪತಿ ಹಾಗೂ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಪದ್ಧತಿಯ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ಶುಲ್ಕ ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಆಕುಕ 132 ಪಿಐಎಂ 2023, ದಿನಾಂಕ:14.09.2023.
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 258 ಪಿಐಎಂ 2024, ದಿನಾಂಕ:22.08.2024
3. ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ ಸಂಖ್ಯೆ: AYUSH/47/ DEV2/2025, ದಿನಾಂಕ: 15.07.2025, AYUSH/48/DEV2/2025, ದಿನಾಂಕ: 14.07.2025 & AYUSH/49/DEV2/2025, ದಿ: 14.07.2025

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಆದೇಶದಲ್ಲಿ, 2023-24ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ ಮತ್ತು ಅನುದಾನ ರಹಿತ, ಖಾಸಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ, ಹೋಮಿಯೋಪತಿ, ಆಯುರ್ವೇದ ಹಾಗೂ ಯುನಾನಿ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (2)ರ ಸರ್ಕಾರದ ಆದೇಶದಲ್ಲಿ ಆಯುರ್ವೇದ, ಯುನಾನಿ ಹಾಗೂ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಪದ್ಧತಿಯಲ್ಲಿನ ರಾಜ್ಯದ ಸರ್ಕಾರಿ ಮತ್ತು ಅನುದಾನ ರಹಿತ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತ್ತಕೋತ್ತರ ಕೋರ್ಸ್‌ಗಳಿಗೆ 2023-24ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿದ ಸೀಟು ಹಂಚಿಕೆಯ ಅನುಪಾತ ಮತ್ತು ಶುಲ್ಕವನ್ನು 2024-25ನೇ ಸಾಲಿಗೆ ಯಥಾವತ್ತಾಗಿ ಮುಂದುವರೆಸಿ ಆದೇಶಿಸಿದೆ ಹಾಗೂ ಅನುದಾನರಹಿತ ಖಾಸಗಿ ಹೋಮಿಯೋಪತಿ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದ ಈ ಕೆಳಕಂಡ ಕೋಟಾ ಸೀಟುಗಳ ಶುಲ್ಕವನ್ನು ಮಾತ್ರ ಈ ಕೆಳಗೆ ನಮೂದಿಸಿರುವಂತೆ ಕಡಿಮೆ ಮಾಡಿ ಆದೇಶಿಸಲಾಗಿರುತ್ತದೆ:-

**BHMS Course:**

| Seat Category | Percentage of seats | Existing Fees for 2023-24 | Proposed Fees for 2024-25 |
|---|---|---|---|
| All India Quota | 15% | Rs.2,30,000.00 | Rs.2,25,000.00 |
| Management Quota | 40% | Rs.3,50,000.00 | Rs.2,50,000.00 |
| Management/NRI Quota | 20% | Rs.3,50,000.00 | Rs.2,50,000.00 |

**M.D. (Hom) Courses:**

| Seat Category | Percentage of seats | Existing Fees for 2023-24 | Proposed Fees for 2024-25 |
|---|---|---|---|
| All India Quota | 15% | Rs.4,00,000.00 | Rs.2,50,000.00 |
| Management Quota | 40% | Rs.4,50,000.00 | Rs.2,75,000.00 |
| Management/NRI Quota | 20% | Rs.4,50,000.00 | Rs.2,75,000.00 |

ಮೇಲೆ ಓದಲಾದ ಕ್ರ.ಸಂ. (3)ರ ಪತ್ರಗಳಲ್ಲಿ ಆಯುಕ್ತರು, ಆಯುಷ್ ಇಲಾಖೆ ಇವರು ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಆಯುರ್ವೇದ, ಯುನಾನಿ, ಹೋಮಿಯೋಪತಿ ಮತ್ತು ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ 2024-25ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿರುವ ಸೀಟು ಹಂಚಿಕೆ ಅನುಪಾತ ಮತ್ತು ಶುಲ್ಕವನ್ನು 2025-26ನೇ ಸಾಲಿಗೆ ಯಥಾವತ್ತಾಗಿ ಮುಂದುವರೆಸುವಂತೆ ಕೋರಿರುತ್ತಾರೆ.

ಆಯುಕ್ತರು, ಆಯುಷ್ ಇಲಾಖೆ ಇವರ ಪ್ರಸ್ತಾವನೆ ಹಾಗೂ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದ ಸರ್ಕಾರವು 2024-25ನೇ ಸಾಲಿನ ಸೀಟು ಹಂಚಿಕೆ ಅನುಪಾತ ಹಾಗೂ ಶುಲ್ಕವನ್ನು ಯಥಾವತ್ತಾಗಿ ಮುಂದುವರೆಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 345 ಪಿಐಎಂ 2025, ಬೆಂಗಳೂರು,**
**ದಿನಾಂಕ: 02.08.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಯುರ್ವೇದ, ಹೊಮಿಯೋಪತಿ, ಯುನಾನಿ ಹಾಗೂ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಪದ್ಧತಿಯಲ್ಲಿನ ರಾಜ್ಯದ ಸರ್ಕಾರಿ, ಅನುದಾನಿತ

.....2

48

ಮತ್ತು ಅನುದಾನ ರಹಿತ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ 2024-25ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿದ ಸೀಟು ಹಂಚಿಕೆಯ ಅನುಪಾತ ಮತ್ತು ಶುಲ್ಕವನ್ನು 2025-26ನೇ ಸಾಲಿಗೆ ಯಥಾವತ್ತಾಗಿ ಮುಂದುವರೆಸಿ ಆದೇಶಿಸಿದೆ.

ಖಾಸಗಿ ಆಡಳಿತ ಮಂಡಳಿಯವರು ಸರ್ಕಾರ ನಿಗದಿಪಡಿಸಿದ ಗರಿಷ್ಠ ವಾರ್ಷಿಕ ಶುಲ್ಕದ ಮೊತ್ತಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು NCISM ಹಾಗೂ NCH ಹೊರಡಿಸಿರುವ ಮಾರ್ಗಸೂಚಿ ಹಾಗೂ ವೇಳಾ ಪಟ್ಟಿಗಳನುಸಾರ ಕೌನ್ಸಿಲಿಂಗ್ ನಡೆಸುವುದು.

ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಕೋರ್ಸುಗಳಿಗೆ ಸಂಬಂಧಿಸಿದಂತೆ NRI/ ಆಡಳಿತ ಮಂಡಳಿ ಕೋಟಾ ಸೀಟುಗಳನ್ನು NRI ಅಭ್ಯರ್ಥಿಗಳಿಗೆ 2 (ಎರಡು) ಸುತ್ತಿನ ಕೌನ್ಸೆಲಿಂಗ್ ನಡೆಸಿದ ಬಳಿಕ, ಉಳಿಕೆ ಸೀಟುಗಳನ್ನು ಅದೇ NRI ಶುಲ್ಕದಲ್ಲೇ ಆಡಳಿತ ಮಂಡಳಿ ಕೋಟಾದಡಿಯಲ್ಲಿ ಕೆ.ಇ.ಎ. ಮೂಲಕ ಹಂಚಿಕೆ ಮಾಡತಕ್ಕದ್ದು.

ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯಗಳಿಗೆ 20% ಆಡಳಿತ ಮಂಡಳಿಯ ಕೋಟಾ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ 2ನೇ ಸುತ್ತಿನ ಕೌನ್ಸೆಲಿಂಗ್ ಬಳಿಕ ಉಳಿಕೆ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಆಡಳಿತ ಮಂಡಳಿಗಳಿಗೆ ಬಿಟ್ಟುಕೊಡತಕ್ಕದ್ದು.

ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯಗಳ ಪದವಿ ಕೋರ್ಸ್ 60% ಮತ್ತು ಸ್ನಾತಕೋತ್ತರ ಕೋರ್ಸ್ 75% NRI ಮತ್ತು ಆಡಳಿತ ಮಂಡಳಿ ಕೋಟಾ ಸೀಟುಗಳನ್ನು ಆಡಳಿತ ಮಂಡಳಿಗಳೇ ಭರ್ತಿ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

2/8

(ಶ್ರೀಪತಿ ಪಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆವೈಪ ಮತ್ತು ಸಮನ್ವಯ)

02/08

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ/ಇ&ಆರ್.ಎಸ್.ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಅಂಚೆಪಟ್ಟಿಗೆ ಸಂಖ್ಯೆ: 5329, 560 001.
3. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
4. ಕುಲಸಚಿವರು, ರಾಜೀವ್ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
6. ಸಂಬಂಧಪಟ್ಟ ಮಹಾವಿದ್ಯಾಲಯಗಳಿಗೆ, (ಆಯುಕ್ತರು, ಆಯುಷ್ ಇಲಾಖೆ ಇವರ ಮುಖಾಂತರ).
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**<u>ಪ್ರತಿ:</u>**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, 4ನೇ ಮಹಡಿ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.